# ದಿಕ್ಕೆಡಿಸುವ ದಿಕ್ಕುಗಳು

**ಹೆತ್ತವರ ಬದುಕಿನ ಮುಸ್ಸಂಜೆಯಲ್ಲಿ ದಿಕ್ಕಾಗಬೇಕಾದ ಮಕ್ಕಳಿಂದು ಭೌಗೋಳಿಕ ಗಡಿರೇಖೆಗಳನ್ನು ದಾಟಿ ವಿವಿಧ ದಿಕ್ಕುಗಳಿಗೆ ಚದುರಿಹೋಗಿದ್ದರೆ, ಜೊತೆಯಲ್ಲೇ ಉಳಿದವರ ನಡುವೆಯೂ ಹೊಂದಾಣಿಕೆ ಸಮಸ್ಯೆ ತಲೆದೋರಿ ಮನೆಯೊಂದು ಮೂರು ಬಾಗಿಲಾಗಿದೆ. ಆಧುನಿಕ ಕೂಡು ಕುಟುಂಬದ ಪರಿಕಲ್ಪನೆಯಲ್ಲಿರುವ ಗಂಡ ಹೆಂಡತಿ ಎಂಬ ಎರಡೇ ಕ್ಯಾರೆಕ್ಟರ್‌ಗಳೂ ಪರಸ್ಪರ ಮಾರಿ ನೋಡಲೂ ಪುರಸೊತ್ತಿಲ್ಲದೆ ವಿಭಿನ್ನ ದಿಕ್ಕುಗಳಿಗೆ ತಿರುಗಿ ಮೊಬೈಲ್ ತೀಡುತ್ತಿವೆ. ಉತ್ತರ ಧ್ರುವದಿಂ... ದಕ್ಷಿಣ ಧ್ರುವಕೂ... ಬೀಸುತ್ತಿದ್ದ ಚುಂಬಕ ಗಾಳಿ ಸಂವಹನದ ಕೊರತೆಯಿಂದ ಹಿಮ್ಮೆಟ್ಟುತ್ತಿದೆ**

■ **ಸುಮಾ ರಮೇಶ್**

ಕಲೆ: ಸಂತೋಷ್ ಸಸಿಹಿತ್ಲು

'ವಿಚ್ ಆರ್ ದ ಫೋರ್ ಮೇಯ್ನ್ ಡೈರೆಕ್ಷನ್ಸ್...?' – ಭೂಗೋಳ ಶಾಸ್ತ್ರದ ಈ ಮೂಲಭೂತ ಪ್ರಶ್ನೆಗೆ ನಾರ್ತ್, ಸೌತ್, ಈಸ್ಟ್, ವೆಸ್ಟ್ ಎಂಬ ಸಿದ್ಧ ಉತ್ತರ ಸಲೀಸಾಗಿ ತರಗತಿಯ ಅಷ್ಟ ದಿಕ್ಕುಗಳಿಂದಲೂ ಬಂದು ಅಪ್ಪಳಿಸುತ್ತಿತ್ತು. ನಂತರ ಮೇಷ್ಟ್ರು ಒಬ್ಬೊಬ್ಬರನ್ನೇ ಕರೆದು ಪ್ರಾಯೋಗಿಕವಾಗಿ ದಿಕ್ಕುಗಳನ್ನು ಗುರುತಿಸಲು ಹೇಳುವಾಗ ಎಲ್ಲರದೂ ದಿಕ್ಕೆಟ್ಟಂತಹ ಪರಿಸ್ಥಿತಿ! ಧಕ್... ಧಕ್... ಕರ್ ನೇ ಲಗಾ... ಹೋ ಮೋರ ದಿಯರಾ ಢರ್ ನೇ ಲಗಾ... ಎನ್ನುತ್ತಾ ಢವಗುಟ್ಟುವ ಎದೆಯನ್ನು ಮುಟ್ಟಿಕೊಳ್ಳುತ್ತಿದ್ದೆವು.

ಸೂರ್ಯ ಹುಟ್ಟುವುದು ಪೂರ್ವ ಯಾನೆ ಈಸ್ಟ್ ಎಂದು ತಿಳಿದಿದ್ದರೂ ಜಿಯಾಗ್ರಫಿ ಪಿರಿಯಡ್ ಹೊತ್ತಿಗೆ ಸೂರ್ಯ ನೆತ್ತಿ ಮೇಲೇರಿ ಅಂವ ಹುಟ್ಟಿ ಬಂದ ದಿಕ್ಕು ಗೋಚರಿಸದೆ ಎಲ್ಲರ ದಿಕ್ಕು ತಪ್ಪಿಸುತ್ತಿದ್ದ. ಮ್ಯಾಪಿನಲ್ಲಿ ನಾರ್ತ್ ಇಂಡಿಯಾವನ್ನು ಮೇಲ್ಭಾಗದಲ್ಲೂ, ಸೌತ್ ಇಂಡಿಯಾವನ್ನು ಕೆಳ ಭಾಗದಲ್ಲೂ ಟ್ರೇಸ್ ಮಾಡಿದ್ದ ನೆನಪಿನಿಂದ ಹಲವು ಪ್ರವೀಣರು ಶಾಲೆಯ ಸೀಲಿಂಗ್‌ನೆಡೆಗೆ ಕೈ ತೋರಿ 'ನಾರ್ತ್' ಎಂದೂ, ತಮ್ಮ ಪಾದಗಳೆಡೆಗೆ ಕೈ ತೋರಿ 'ಸೌತ್' ಎಂದೂ ಹೇಳಿ ದಿಕ್ಪಾಠ ಕಲಿಸಿದ ಗುರುಗಳಿಗೇ ದಿಗ್ಭ್ರಮೆ ಹುಟ್ಟಿಸುತ್ತಿದ್ದರು. ಪೂರ್ವದ ಬಲಭಾಗ ದಕ್ಷಿಣ, ಎಡಭಾಗ ಉತ್ತರ ಎಂಬ ಅರಿವಿದ್ದರೂ ಹಲವರ ಸಮಸ್ಯೆ ಇದ್ದದ್ದು ಎಡ–ಬಲಗಳನ್ನು ಗುರುತಿಸುವಲ್ಲಿ. ಪ್ರತಿದಿನ ಬೆಳಿಗ್ಗೆ ಬಂಪ್ ಮೇಲೆ ಒದೆಸಿಕೊಂಡು ಬಲಭಾಗದಿಂದ ದಿಗ್ಗನೆದ್ದು ಬಂದರೂ ಶಾಲೆಯಲ್ಲಿ ಮತ್ತದೇ ಎಡ–ಬಲಗಳ ತಡಂಬಡ.

ಈ ಪ್ರಧಾನ ದಿಕ್ಕುಗಳ ನಡುವೆ ನಾರ್ತ್ ಈಸ್ಟ್, ನಾರ್ತ್ ವೆಸ್ಟ್, ಸೌತ್ ಈಸ್ಟ್, ಸೌತ್ ವೆಸ್ಟ್ ಎಂಬ ಉಪದಿಕ್ಕುಗಳು ನುಸುಳಿ ನಿವೇಶನದ ರಿಜಿಸ್ಟರ್ ಪತ್ರದ ಚಕ್ಕುಬಂದಿಗಳಂತೆ ಶಾಲೆಯ ಪೂರ್ವಕ್ಕೆ ಪಾಂಡು ಹೋಟ್ಲು, ಪಶ್ಚಿಮಕ್ಕೆ ಪ್ಲೇ ಗ್ರೌಂಡು, ಉತ್ತರಕ್ಕೆ ಊಟದ ಹಾಲು, ದಕ್ಷಿಣಕ್ಕೆ ಶೌಚಾಲಯ... ಹೀಗೆ ಗುರುತಿಟ್ಟುಕೊಂಡು ಆಯಾ ದಿಕ್ಕುಗಳ ದಿಶಾವಲಯ ಗುರುತಿಸುವಷ್ಟರಲ್ಲಿ ಈಶಾನ್ಯ ಮೂಲೆಯಲ್ಲಿ ಗಂಟೆ ಮೊಳಗಿ ದಿಕ್ಕಿನ ದಿಗಿಲು ಅಂತ್ಯ ಕಾಣುತ್ತಿತ್ತು.

ಇದು ಇಂಗ್ಲಿಷ್ ದಿಕ್ಕುಗಳ ಕಥೆಯಾದರೆ ಕನ್ನಡದ ದಿಕ್ಕುಗಳು ಇನ್ನೂ ಕಾಂಪ್ಲಿಕೇಟೆಡ್. ಪೂರ್ವ ಪಶ್ಚಿಮ, ಉತ್ತರ ದಕ್ಷಿಣಗಳೆಂಬ ನೇರ ದಿಕ್ಕುಗಳ ನಡುವೆ ಸಿಲುಕಿದ ವಿಭಿನ್ನ ಹೆಸರಿನ ಈಶಾನ್ಯ ಆಗ್ನೇಯ, ನೈರುತ್ಯ ವಾಯುವ್ಯಗಳೆಂಬ ಡಯಾಗನಲ್ ದಿಕ್ಕುಗಳ ಡೈರೆಕ್ಷನ್‌ಗಿಂತಲೂ ಆ ಹೆಸರುಗಳೇ ನೆನಪಿಗೆ ಬಾರದೆ ಹೆಚ್ಚು ಕಾಡುತ್ತಿದ್ದವು. ಇವೇ ದಿಕ್ಕುಗಳು ಮುಂದಿನ ಹಂತದಲ್ಲಿ ಪಡುವಣ ಮೂಡಣ ತೆಂಕಣ ಬಡಗಣಗಳೆಂದೂ ಅವುಗಳ ನಡುವಿನ ಉಪದಿಕ್ಕುಗಳು ಪಡುಬಡಗು, ಬಡಮೂಡಣ, ಪಡುತೆಂಕಣ, ಮೂಡುದೆಂಕಣಗಳೆಂದು ತಿಳಿದಾಗ ತಡಬಡಾಯಿಸಿ ಮೂರ್ಛೆ ಹೋದಂತಾಗಿತ್ತು. ಮನೆಯಲ್ಲಿ ಚಿಳ್ಳೆ ಮಿಳ್ಳೆಗಳಿಗೆ ರೊಟ್ಟಿ ಮುರಿದು ಹಂಚುವಂತೆ ಗುಂಡಗಿನ ಭೂಮಿಯನ್ನು ಎಂಟು ಭಾಗ ಕೊಯ್ದು ಪ್ರತೀ ಭಾಗಕ್ಕೂ ಎರಡೆರಡು ವಿಚಿತ್ರ ಹೆಸರನ್ನಿಟ್ಟು ನಮ್ಮ ತಲೆಗೂ ನಾಲಿಗೆಗೂ ತ್ರಾಸ ಕೊಟ್ಟವರ ಶಪಿಸುತ್ತಾ, ದಿಕ್ಪಾಠ ಕಲಿಯುವಷ್ಟರಲ್ಲಿ ಆಕಾಶ ಪಾತಾಳಗಳೂ ವಿಶುವಲೈಸ್ ಆಗಿ ದಶ ದಿಗ್ದರ್ಶನವೇ ಆಗುತ್ತಿತ್ತು!



ವಾಸ್ತುಶಾಸ್ತ್ರದಲ್ಲಿ ದಿಕ್ಕುಗಳದೇ ಪ್ರೈಮರಿ ರೋಲ್. ಮನೆ ಎಷ್ಟೇ ಬಿಎಚ್‌ಕೆಯದ್ದಾದರೂ ಆಗ್ನೇಯದಲ್ಲಿ ಅಡುಗೆಕೋಣೆ, ನೈರುತ್ಯದಲ್ಲಿ ಮಾಸ್ಟರ್ ಬೆಡ್‌ರೂಮ್, ಈಶಾನ್ಯದಲ್ಲಿ ಪೂಜಾರೂಮ್, ವಾಯುವ್ಯದಲ್ಲಿ ಬಾತ್‌ರೂಮ್ ಎಂಬ ಸಿದ್ಧ ಸೂತ್ರ ಬಳಸಿಯೇ ಮನೆ ಸಿದ್ಧವಾಗುತ್ತದೆ. ಗೃಹಪ್ರವೇಶದಂದು ಮಂತ್ರಿಗಳಿಗೆ ಖಾತೆ ಹಂಚುವಂತೆ ವಾಸ್ತುಪುರುಷನೊಂದಿಗೆ ಪ್ರಮಾಣವಚನ ಸ್ವೀಕರಿಸುವ ದಿಕ್ಪಾಲಕರನ್ನು ಬಣ್ಣ ಬಣ್ಣದ ರಂಗೋಲಿ ಪುಡಿಗಳಲ್ಲಿ ಒಂದು ಚೌಕದೊಳಗೆ ಸೀಜ್ ಮಾಡಿ ಹಾಲುಕ್ಕಿಸಿ, ದಿಕ್ಬಲಿ, ದಿಗ್ಬಂಧನ ಇನ್ನಿತರ ಸೇವೆಗಳಿಂದ ಸಂತುಷ್ಟಿಗೊಳಿಸಿ ಹಂಚಿದ ಖಾತೆಗಳಲ್ಲಿ ಕ್ಯಾತೆಯಾಗದಂತೆ ಸುವ್ಯವಸ್ಥೆ ಕಾಪಾಡಲು ಕೋರಲಾಗುವುದು.

ದಕ್ಷಿಣ ಹಾಗೂ ಪಶ್ಚಿಮ ಅಲಕ್ಷ್ಯಕ್ಕೊಳಗಾದ ದಿಕ್ಕುಗಳು. ಇವುಗಳಿಗೆ ಮಣೆ ಹಾಕುವವರು ವಿರಳ. ಸೈಟ್ ಕೊಳ್ಳುವಾಗ, ಮನೆ ಬಾಡಿಗೆಗೆ ಪಡೆಯುವಾಗ ಇವು ಅನ್ ಎಂಪ್ಲಾಯ್ಡ್ ವರನಂತೆ, ಪ್ರಾಯ ಮೀರಿದ ವಧುವಿನಂತೆ ಬೇಡಿಕೆ ಕಳೆದುಕೊಂಡಿರುತ್ತವೆ. ಸೌತ್ ಫೇಸಿಂಗ್ ಸೈಟ್ ಕೊಂಡವರು ಮನೆ ಕಟ್ಟುವಾಗ ಕಟ್ಟಡದ ಮುಖವನ್ನು ಪೂರ್ವಕ್ಕೂ ವೆಸ್ಟ್ ಫೇಸಿಂಗ್ ಸೈಟ್ ಕೊಂಡವರು ಉತ್ತರಕ್ಕೂ ತಿರುಗಿಸಿ ಪ್ರಾಯಕ್ಕೆ ಬಂದ ಹೆಣ್ಣುಮಗಳಿಗೆ ಕೆಲವೊಂದು ಕಟ್ಟುಪಾಡು ವಿಧಿಸುವಂತೆ ಮನೆಯ ಮುಂಬಾಗಿಲನ್ನು ರಸ್ತೆಯಿಂದ ಮರೆಮಾಚಿ, ಕೇವಲ ಅದರ ಸೈಡ್ ಫೇಸ್ ಅಷ್ಟೇ ರಸ್ತೆಗೆ